


International Journal of Kannada Research
www.kannadajournal.com

**ISSN: 2454–5813**
IJKR 2021; 7(4): 23-26
© 2021 IJKR
www.kannadajournal.com
Received: 20-06-2021
Accepted: 11-08-2021

**ಡಾ. ಎ.ಎಲ್.ದೇಸಾಯಿ**
ಸಹಯಕ ತಬಲಾ ಉಪನ್ಯಾಸಕರು,
ಕರ್ನಾಟಕ ವಿಶ್ವವಿದ್ಯಾಲಯದ
ಲಲಿತ ಕಲಾ ಹಾಗೂ ಸಂಗೀತ
ಮಹಾವಿದ್ಯಾಲಯ, ಧಾರವಾಡ

**Corresponding Author:**
**ಡಾ. ಎ.ಎಲ್.ದೇಸಾಯಿ**
ಸಹಯಕ ತಬಲಾ ಉಪನ್ಯಾಸಕರು,
ಕರ್ನಾಟಕ ವಿಶ್ವವಿದ್ಯಾಲಯದ
ಲಲಿತ ಕಲಾ ಹಾಗೂ ಸಂಗೀತ
ಮಹಾವಿದ್ಯಾಲಯ, ಧಾರವಾಡ

# ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಕನ್ನಡ ಸಾಹಿತ್ಯ ಕೃತಿಗಳ ಅವಲೋಕನ

**ಡಾ. ಎ.ಎಲ್.ದೇಸಾಯಿ**

ಪಂ. ಪುಟ್ಟರಾಜ ಕವಿ ಗವಾಯಿಗಳೆ ಸ್ವತಃ ತಾವೇ ತರಂಗ ವಾರ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ 03–09–1993 ರಲ್ಲಿ ಪ್ರಕಟವಾಗಿದ್ದು, ಅದರ ಸಂದರ್ಶಕರು ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಪ್ರಸ್ತುತ ಮುಖ್ಯಸ್ಥರಾದ ಡಾ. ಜೆ. ಎಂ. ಚಂದುನವರ ಇವರೊಂದಿಗೆ ಹಂಚಿಕೊಂಡಿರುವ ಅನಿಸಿಕೆಯಂತೆ “ಪ್ರಾರಂಭದಲ್ಲಿ ಸಾಹಿತ್ಯ ಕಲಿಬೇಕು ಅಂತ ಆಶೆ ಇದ್ದಿದ್ದಿಲ್ಲ. ಸಂಸ್ಕೃತ ಅಭ್ಯಾಸ ಮಾಡ್ತಾ ಮಾಡ್ತಾ ಸಾಹಿತ್ಯದ ಕಡೆ ಒಲವು ಬಂತು. ಅನಂತರ ಕನ್ನಡ ಅಭ್ಯಾಸ ಮಾಡಿದೆ. ಷಡಕ್ಷರ ಕವಿಗಳ, ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಶಬ್ಧಮಣಿದರ್ಪಣ ಮುಂತಾದ ವ್ಯಾಕರಣ ಗ್ರಂಥಗಳನ್ನು ಅಭ್ಯಾಸ ಮಾಡಿದೆ. ಮುಂದೆ ಅದೇ ಪ್ರಕಾರ ಕಾವ್ಯ ರಚನೆ ಮಾಡಿದೆ, ಅನಂತರ ಹಿಂದಿ ಕಲಿಯಬೇಕು ಅಂತ ಆಶೆಯಾಯಿತು. ಆಶ್ರಮದಲ್ಲಿ ಸಂಗೀತ ಚೀಜ್‌ಗಳನ್ನ ಕಲಿಯುವವರು ಬಹಳಷ್ಟು ಜನರಿದ್ದರು, ಆಗ ನಾನೇ ಸ್ವತಃ ಚೀಜ್‌ಗಳನ್ನ ರಚನೆ ಮಾಡಿ ತೋರಿಸಿದೆ. ಅವರು ಬಹಳ ಆನಂದಪಟ್ಟು, ಚನ್ನಾಗಿ ಆಗ್ತಾವ್ ಇದೇ ರೀತಿ ಬರಿ ಅಂತ ಪ್ರೋತ್ಸಾಹ ಕೊಟ್ರು. ಆಗ ನಾನು ಕಿಶೋರ ಸದಾರಂಗ ಹೆಸರಿಟ್ಟು ಅನೇಕ ಚೀಜ್‌ಗಳನ್ನು ರಚನೆ ಮಾಡಿದೆ. ಮುಂದೆ ಪಂಚಾಕ್ಷರರ ಹೆಸರಿಟ್ಟು ಗಾನ ಸುಧಾ ಗ್ರಂಥ ರಚಿಸಿದೆ.

ನಂತರದಲ್ಲಿ ಕನ್ನಡದಲ್ಲಿ ಪ್ರಥಮವಾಗಿ ಬಸವೇಶ್ವರರ ಪುರಾಣ, ಹಿಂದಿಯಲ್ಲಿ ಬಸವ ಪುರಾಣ, ಸಂಸ್ಕೃತದಲ್ಲಿ ಕುಮಾರ ಗೀತೆಗಳನ್ನು ಮೂರು ಭಾಷೆಯಲ್ಲಿ ಪ್ರಥಮದಲ್ಲಿ ರಚಿಸಲಾಗಿರುವ ಕೃತಿಗಳಾಗಿವೆ. ಅವರ ಅಪಾರವಾದ ಸಾಹಿತ್ಯ ಜ್ಞಾನವನ್ನು ವರ್ಣಿಸಲಸಾಧ್ಯವೆನ್ನಬಹುದು ಒಬ್ಬ ಅಂಧನಾದ ಮಾನುಷ್ಯ ಅಪಾರವಾದ ಸಾಹಿತ್ಯ ಕೃತಿಗಳನ್ನು ಈ ದೇಶಕ್ಕೆ ಮತ್ತು ನಮ್ಮ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವುದು ನಮ್ಮ ನಾಡು ನುಡಿಯ ಹಿರಿಮೆ ಎನ್ನಬಹುದು. ಅವರು ರಚಿಸಿದ ಕೃತಿಗಳನ್ನು ಭಾಷಾ ಆಧರವಾಗಿ ಮೂರು ಭಾಗಗಳನ್ನು ವಿಂಗಡಿಸಬಹುದಾಗಿದೆ. ಮೊದಲನೇಯದಾಗಿ ಕನ್ನಡ ಭಾಷಾ ಕೃತಿಗಳು, ಎರಡನೇಯದಾಗಿ ಹಿಂದಿ ಕೃತಿಗಳು, ಮೂರನೆಯದಾಗಿ ಸಂಸ್ಕೃತ ಕೃತಿಗಳು. ಈ ಒಂದೊಂದು ಭಾಷಾ ಕೃತಿಗಳಲ್ಲಿ ಅನೇಕ ವಿಭಾಗಗಳನ್ನಾಗಿ ವಿಂಗಡಿಸಬಹುದು ಮೊದಲನೇಯ ಕನ್ನಡ ಸಾಹಿತ್ಯ ಕೃತಿಗಳಲ್ಲಿ 1. ಸಂಗೀತ ಕೃತಿಗಳು 2. ನಾಟಕ ಕೃತಿಗಳು 3. ಧಾರ್ಮಿಕ ಕೃತಿಗಳು ಹೀಗೆ ಮುಂತಾದ ವಿಭಾಗಗಳನ್ನು ಮಾಡಬಹುದಾಗಿದೆ.

## ಕನ್ನಡ ಸಾಹಿತ್ಯ ಕೃತಿಗಳು

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ಪಂ. ಪುಟ್ಟರಾಜ ಕವಿ ಗವಾಯಿಗಳವರು ನೀಡುವುದರೊಂದಿಗೆ ಸಂಗೀತದಲ್ಲಿ ಕನ್ನಡ ಸಾಹಿತ್ಯವು ವಿರಳಾತಿವಿರಳ ಸಾಹಿತ್ಯ ಸಿಗುತ್ತದೆ. ಅದರಲ್ಲು ನಮ್ಮ ಹಿಂದೂಸ್ತಾನಿ ಸಂಗೀತದಲ್ಲಿ ಕನ್ನಡ ಭಾಷೆಯಲ್ಲಿ ಗ್ರಂಥಗಳಂತು ಕಾಣಸಿಗುವುದಿಲ್ಲವೆನ್ನಬಹುದು ಅದರ ಕೊರತೆಯನ್ನು ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು ನೀಗಿಸಿದರೆನ್ನಬಹುದು ಅದಕ್ಕೆ ಉದಾಹರಣೆಯಾಗಿ ಅವರು ರಚಿಸಿರುವ ಸಂಗೀತ ಗ್ರಂಥಗಳಾದ ‘ಸಂಗೀತ ಶಾಸ್ತ್ರ ಜ್ಞಾನ’, ‘ಹಿಂದೂಸ್ತಾನಿ ಗಾನ ಸುಧಾ ಭಾಗ – 1’, ‘ಹಿಂದೂಸ್ತಾನಿ ಗಾನ ಸುಧಾ ಭಾಗ – 2’ ಮತ್ತು ‘ತಾಲ ಪಂಚಾಕ್ಷರಿ’ ಎಂಬ ಸಂಗೀತದ ಪ್ರಮುಖ ಗ್ರಂಥಗಳನ್ನು ಕನ್ನಡ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ನೀಡಿರುವುದನ್ನು ಕಾಣುತ್ತೇವೆ.

**ಸಂಗೀತ ಸಾಹಿತ್ಯ ಕೃತಿಗಳು :**

**ಸಂಗೀತ ಶಾಸ್ತ್ರಜ್ಞಾನ :**

ಪಂ. ಪುಟ್ಟರಾಜ ಕವಿ ಗವಾಯಿಗಳವರು ತಮ್ಮ ಈ ಸಂಗೀತ ಶಾಸ್ತ್ರಜ್ಞಾನ ಕೃತಿಯಲ್ಲಿ ಸಂಸ್ಕೃತ ಶ್ಲೋಕವನ್ನು ಸ್ವತಃ ರಚಿಸಿ ಅದರ ಮೂಲಕ ತಮ್ಮ ವಿನಯತೆಯನ್ನು ತಿಳಿಸಿರುವುದು ಮಹತ್ವವಾದ ಅಂಶವೆಂದು ಹೇಳಬಹುದು.

**ಶ್ಲೋಕ**

"ಮಂದಕವಿಃ ಯಶಃಪ್ರಾರ್ಥೀ ಗಮಿಷ್ಯಾಪಹಾಸ್ಯತಾಂ ।
ಪ್ರಾಂಶುಲಭ್ಯೆ ಫಲೇ ಲೋಭಾದುದ್ ಬಾಹುರಿವ ವಾಮನಃ ॥" [1]

ಅಂದರೆ ಉನ್ನತ ಪುರುಷ್ಯನಿಂದ ಪಡೆಯಲಿಕ್ಕೆ ಯೋಗ್ಯವಾದ ಹಣ್ಣಿನ ವಿಷಯದಲ್ಲಿ ಕುರುಚಾದ ಬಾಹುಗಳನ್ನು ವಾಮನನಂತೆ, ಅಪಹಾಸ್ಯ ಹೊಂದುವಹಾಗಿದೆ. ಈ ನನ್ನ ಪ್ರಯತ್ನ ಅದರೂ ಇದೆಲ್ಲವೂ ಗುರುಕೃಪಾ ವಿಶೇಷವೆಂದು ತಿಳಿದು,ಅದರಿಂದಲೇ ಸಾಧ್ಯವಾಗಬಹುದೆಂದು ನನ್ನ ಹಿರಿಯಾಸೆ.

ಯಾಕೆಂದರೆ ಇಲ್ಲಿ ಒಂದು ಶರಣ ಉಕ್ತಿ ನೆನಪಾಗುತ್ತದೆ:

"ಕೊರಡು ಕೊನರುವದು ಬಲು ಬರಡು ಹಯನವಾಗುವುದು
ಕುರುಡಂಗೆ ಕಣ್ಣು ಬಹುದು ನಿನ್ನೊಲುಮೆಯಿಂದಿದೆ ನೈ ಗುರುವೆ ಕೃಪೆಯಾಗು" [2]

ಎಂದು ಮೈಲಾರ ಬಸವಲಿಂಗ ಶರಣರು ಹೇಳಿದಂತೆ ಗುರುಕೃಪೆಯಾದರೆ, ಆಗದೇ ಇದ್ದ ಕಾರ್ಯ ಆಗಿಯೇ ತೀರುತ್ತದೆ ಎಂಬ ಭಾವನೆಯಿಂದ ಈ ಸಂಗೀತ ಗ್ರಂಥ ರಚನೆಗೆ ತೊಡಗಿದ್ದೇನೆ. ನನ್ನ ಸಂಗೀತ ಸೇವೆಯು ಹಾಡುವ ಮೂಲಕವಷ್ಟೇ ಇತ್ತು. ಆ ಸೇವೆ ಈಗಿನ ಪೀಳಿಗೆಗೆ ಉಳಿಯುತ್ತದೆ. ವಿಚಾರ ಮುಂದೊರೆಯಿಸಿದಾಗ ಮುಂದಿನ ಪೀಳಿಗೆಗೇನು? ಎಂಬ ಮಾತು ಮುಂದೆ ನಿಲ್ಲುತ್ತದೆ. ಹೀಗಿರುವಾಗ ಗ್ರಂಥ ರೂಪವೇ ಅದಕ್ಕೆ ನಿದರ್ಶನ. ಆದ್ದರಿಂದ ಈ ಸಂಗೀತ (ಹಾಡುವುದು) ನಮ್ಮ ಭಾರತದಲ್ಲಿ ಹೆಚ್ಚೆಚ್ಚು ಪ್ರಚಾರದಲ್ಲಿ ಬಂದಿದೆ. ಆದರೆ ಅದಕ್ಕೆ ಬೇಕಾದ ಶಾಸ್ತ್ರ ಮಾಹಿತಿ ಮಾತ್ರ ಸ್ವಲ್ಪ ಕೊರತೆಯದಾಗಿದೆಯೆಂದರೆ ಅಷ್ಟೊಂದು ಅತಿಶಯೋಕ್ತಿಯಾಗಲಾರದೆಂದು ನನ್ನ ವಿಶ್ವಾಸ.

ಸಂಗೀತ ಶಾಸ್ತ್ರದ ಕೊರತೆಯೇನೂ ಉತ್ತರ ಭಾರತದಲ್ಲಿ ಕಡಿಮೆ ಇಲ್ಲಾ, ಆದರೆ ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಇದರ ಕೊರತೆ ತೀರಾ ಕಡಿಮೆ ಇದೆ. ಕನ್ನಡದಲ್ಲಿ ಅಚ್ಚಾದ ಗ್ರಂಥ ಮಾತ್ರ ಒಂದು ಸಿಗಬಹುದು. ಹೀಗಿರುವಾಗ ಈ ಕೊರತೆಯನ್ನು ತುಂಬಲು ಅಲ್ಪ ಪ್ರಯತ್ನ ಮಾಡಿದ್ದೇನೆ. ಸಂಗೀತ ಶಾಸ್ತ್ರ ಬಹಳ ಆಳವಾದದ್ದು. ಆದರೆ ವಿಚಾರ ವೇದಿಕೆಯು ಇಷ್ಟೇ ಇದೆಯೆಂದು ಹೇಳುವುದು ಅಸಾಧ್ಯ. ಅಂದಾಗ ಅದರ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ ಸರಿ. ಸಮುದ್ರದ ನೀರನ್ನು ತರುವುದು ಅಸಾಧ್ಯ. ಅದನ್ನು ಅಳೆಯುವುದಂತೂ ದುಸ್ಸಾಧ್ಯ. ಆದರೆ ಒಂದು ಬಿಂದಿಗೆಯಲ್ಲಿ ತುಂಬಿಡುವುದು ಮಾತ್ರ ಸಾಧ್ಯ. ಹಾಗೆಯೇ ಸಂಗೀತ ಶಾಸ್ತ್ರದ ಬಗ್ಗೆ ಇಲ್ಲಿ ನಾವು ಗ್ರಂಥದಲ್ಲಿ ಸ್ವಲ್ಪವನ್ನು ಅಂದರೆ ನಮ್ಮ ನಿಮ್ಮಗಳಿಗೆ ಅವಶ್ಯವಾದ ಶಾಸ್ತ್ರ ಮಾಹಿತಿಯನ್ನು ಸಂಗ್ರಹಿಸಿ ಕೊಡಬಲ್ಲೆವು.

**ಗ್ರಂಥ ಪರಿಚಯ**

ಗುರುಸ್ತೋತ್ರ, ಶಿವಸ್ತೋತ್ರಗಳಿಂದ ಪ್ರಾರಂಭಿಸಲ್ಪಟ್ಟ ಈ ಗ್ರಂಥದಲ್ಲಿ ಅಹತ, ಅನಾಹತ ನಾದಗಳ ವಿಚಾರವನ್ನು ವ್ಯಕ್ತಪಡಿಸಲಾಗಿದೆ. ಅಲ್ಲದೇ ಶೃತಿ ವಿಚಾರ, ಷಡ್ಜಾದಿ ಸಪ್ತಸ್ವರಗಳ ಉತ್ಪತ್ತಿ ಅವುಗಳ ಅನುಸರಿಸುವ ಪ್ರಾಣಿಗಳು, ಶುದ್ಧ ವಿಕೃತ ಸ್ವರಗಳ ವಿಚಾರವನ್ನು ಗಾಯಕ ವೃಂದಕ್ಕೆ ಅನುಕೂಲ ಮಾಡಿಕೊಡಲಾಗಿದೆ.

ಗ್ರಾಮಸ್ವರ, ಶೃತಿ, ಅಪಶೃತಿ, ಮಂದ್ರ, ಮದ್ಯ, ತಾರಸಪ್ತಕ ವಿಚಾರಗಳನ್ನು ಮತ್ತು ವಾದಿ ಸಂವಾದಿ, ವಿಚಾರಗಳನ್ನು ವಿವರಿಸಲಾಗಿದೆ. ಸಂಗೀತವೆಂದರೇನು? ಸಂಗೀತಕ್ಕೆ ಬೇಕಾದ ಲಯದ ಮಹತ್ವ, ಕಂಠ, ಸಂಗೀತ ವಿಚಾರ, ಚತುರ್ವಿದ ವಾದ್ಯಗಳ ವಿಚಾರ, ನೃತ್ಯ ವಿಚಾರ, ಮಾರ್ಗ, ದೇಶೀ ಸಂಗೀತ ವಿಚಾರ, ದಿಗಂತ ಪ್ರಾಂತೀಯ ಜಾನಪದ ಸಂಗೀತದ ಬಗ್ಗೆ ಸಾಕಷ್ಟು ವಿಷಯಗಳನ್ನು ಪ್ರತಿಪಾದಿಸಲಾಗಿದೆ. ಅಲ್ಲದೆ ಸಂಗೀತ ಸಾಧನೆ ವಿಷಯವನ್ನು ಮುಖ್ಯವಾಗಿ ನಾವು ಇಲ್ಲಿ ತಿಳಿದುಕೊಂಡು ಅದರಂತೆ ಆಚರಿಸಿ ಗಾನಯೋಗಿಗಳಾದ ಪಂ.ಪಂಚಾಕ್ಷರ ಗವಾಯಿಗಳವರ ಚರಿತ್ರೆಯು ಎಲ್ಲಾ ಗಾಯಕ ವೃಂದದ ಹೃದಯವನ್ನು ಪವಿತ್ರಗೊಳಿಸುವುದಾಗಿ ನಾವು ಭಾವಿಸಿದ್ದೇವೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯಕ್ಕೆ ಸಂಗೀತ ಗ್ರಂಥದ ಮೂಲಕ ಅವರು ನಮ್ಮಗಳಿಗೆ ನೀಡಿರುವುದು ಬಹು ಸೂಕ್ತವಾದ ವಿಷಯ. ಅವರು ಸಂಗೀತದ ಆಳವಾದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ತಿಳಿಸಿರುವುದರಿಂದ ಕನ್ನಡ ಸಾಹಿತ್ಯಕ್ಕೆ ಜೊತೆಗೆ ಸಂಗೀತ ಕ್ಷೇತ್ರಕ್ಕೆ ಮತ್ತು ಕನ್ನಡ ಭಾಷೆಯ ಪ್ರೀತಿಗೆ ನಾವು ಅಭಾರಿಯಾಗಿರುವುದು ಸೂಕ್ತ.

ಇನ್ನು ಇವರು ರಚಿಸಿದ ಸಂಗೀತ ಗ್ರಂಥಗಳಾದ ಗಾನ ಸುಧಾ ಭಾಗ – 1 ಮತ್ತು 2 ಹಾಗೂ ತಾಲ ಪಂಚಾಕ್ಷರಿಯು ತಬಲಾ ವಿಷಯಗಳನ್ನೊಳಗೊಂಡ ಕೃತಿಯಾಗಿದೆ, ಇವುಗಳು ಹೆಚ್ಚು ಪ್ರಾಯೋಗಿಕ ವಿಷಯಗಳನ್ನು ಒಳಗೊಂಡಿರುವುದು ಕಾಣುತ್ತೇವೆ. ಒಟ್ಟಾರೆಯಾಗಿ ಸಂಗೀತದ ಮೂಲಕ ಕನ್ನಡ ನಾಡಿಗೆ ಮತ್ತು ಕನ್ನಡ ಸಾಹಿತ್ಯಕ್ಕೆ ಪೂಜ್ಯರ ಕೊಡುಗೆ ಅಪಾರವಾದದ್ದು.

**ನಾಟಕ ಸಾಹಿತ್ಯ ಕೃತಿಗಳು**

ಕನ್ನಡ ವೃತ್ತಿ ರಂಗಭೂಮಿ ಪ್ರತಿಭೆಗಳಾದ ಸವಣೂರು ವಾಮನರಾವ್ ಮಾಸ್ತರ, ಕಣಬರ್ಗಿ ಶಿವಮೂರ್ತಿ, ಗರುಡ ಸದಾಶಿವರಾಯರು, ಕಂದಗಲ್ಲ ಹನುಮಂತರಾಯರು, ನಲವಡಿ ಶ್ರೀಕಂಠ ಶಾಸ್ತ್ರಿಗಳು, ಯರಾಶಿ ಭರಮಪ್ಪನವರು ನಾಡೋಜ ಶತಾಯುಷಿ ಏಣಗಿ ಬಾಳಪ್ಪನವರು, ಶ್ರೀ ಶಾರದಾ ನಾಟಕ ಮಂಡಳಿ ಗೋಕಾಕ, ಜಮಖಂಡಿ ಕಂಪನಿ ಹೀಗೆ ಖಾತನಾಮರನೇಕರು ಕನ್ನಡ ವೃತ್ತಿ ರಂಗಭೂಮಿಯನ್ನು ಮನಸಾರೆ ಪ್ರೀತಿಸಿ, ಪೋಷಿಸಿ ಕನ್ನಡ ವೃತ್ತಿಭೂಮಿ ಕನ್ನಡ ಸಾಹಿತ್ಯ ಸಂಗೀತ ಕಲೆಯನ್ನು ಬೆಳಸಿದ್ದಷ್ಟೆ ಅಲ್ಲದೆ ಅನೇಕ ಹೆಸರಾಂತ ಹಿಂದೂಸ್ತಾನಿ ಗಾಯಕರನ್ನು ಈ ದೇಶಕ್ಕೆ ನೀಡಿದೆ. ಇವರೆಲ್ಲರ ನಡುವೆ ನಮ್ಮ ಪಂ. ಪುಟ್ಟರಾಜರು ವಿಶಿಷ್ಟವಾಗಿ ಕಾಣುತ್ತಾರೆ. ಕಾರಣ ಒಬ್ಬ ಅಂಧ ನಾಟಕದ ದೃಷ್ಯಗಳನ್ನು ಕಾಣದಾದರು, ಪ್ರಕೃತಿಯಲ್ಲಿಯ ಯಾವ ದೃಷ್ಯಗಳನ್ನು ಅವರು ಕಾಣದಾಗಿದ್ದರೂ ದೃಷ್ಯ ಕಲೆಯಾದ ನಾಟಕ ರಂಗದಲ್ಲಿ ಪಂ. ಪುಟ್ಟರಾಜ ಕವಿ ಗವಾಯಿಗಳು ನಟನಾಗದಿದ್ದರೂ, ಒಬ್ಬ ಶ್ರೇಷ್ಠ ನಾಟಕ ರಚನಾಕಾರರಾಗಿ ಬೆಳಿದಿದ್ದು ಒಂದು ವಿಸ್ಮಯವೆನ್ನಬಹುದು. ಪೂಜ್ಯರು ಕನ್ನಡ ಸಾಹಿತ್ಯದಲ್ಲಿಯೇ ನಾಟಕಗಳನ್ನು ರಚಿಸಿದವರು ಅಂದಿನ ಸಮಯದಲ್ಲಿ ಮರಾಠ ನಾಟಕಗಳ ಪ್ರಭಾವವು ಹೆಚ್ಚಿರುವ ಸಮಯದಲ್ಲಿ ಪೂಜ್ಯರು 22 ನಾಟಕಗಳನ್ನು ರಚಿಸಿದ್ದರು. ಅವರು ರಚಿಸಿರುವ ನಾಟಕಗಳು ಕೇವಲ ಒಂದು ಪ್ರಕಾರಕ್ಕೆ ಸೀಮಿತವಾಗದೆ ಹಲವಾರು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ ಅವುಗಳನ್ನು ತಮ್ಮ ನಾಟಕ ಕಂಪನಿಯಲ್ಲಿ ಆಡಿಸಿರುವುದು ಒಂದು ಅಭೂತಪೂರ್ವ ಕಾರ್ಯ ಸಾಧನೆಯಾಗಿದೆ ಎಂದರೆ ತಪ್ಪಾಗದು. ಅವರು ರಚಿಸಿದ

ನಾಟಕ ಕೃತಿಗಳಲ್ಲಿ ಒಂದೆರಡನ್ನು ಅವಲೋಕಿಸುವ ಪ್ರಯತ್ನ ಮಾಡಲಾಗಿದೆ.

**ಶಿರಹಟ್ಟಿ ಜಗದ್ಗುರು ಶ್ರೀ ಫಕೀರೇಶ್ವರ ಮಹಾತ್ಮೆ**

ಜಾತಿ, ವರ್ಗ ಪಂಗಡಗಳನ್ನು ಮೀರಿದ ಜಾತ್ಯಾತೀತ ಶಬ್ಧವನ್ನು ಅಕ್ಷರಶಃ ಬದುಕಿನಲ್ಲಿ ಅಳವಡಿಸಿಕೊಂಡವರು ಮತ್ತು ಅದನ್ನ ಜನಮಾನಸದಲ್ಲಿ ಬಿತ್ತಿದ ಗುರುಗಳೆಂದರೆ ಶಿರಹಟ್ಟಿಯ ಶ್ರೀ ಜಗದ್ಗುರು ಫಕೀರೇಶ್ವರ ಸ್ವಾಮಿಗಳು. ಮೂಲ ಕರ್ತೃಗಳು ವಿಜಯಪುರದವರು. ಅಲ್ಲಿನ ದರ್ಗಾದ ಖಾಜಿ ಅಮಿನುದ್ದೀನ್ ಸಾಹೇಬರ ಆಶೀರ್ವಾದದ ಫಲದಿಂದ ಜನಿಸಿದವರು. ಖಾಜಿ ಸಾಹೇಬರ್ ಅಪೇಕ್ಷೆಯಂತೆ, ಆದೇಶದಂತೆ ಜಗದ ಗುರುವಾಗಿ ಬೆಳೆದವರು. ಶಿರಹಟ್ಟಿಯಲ್ಲಿ ನೆಲೆಸಿ ಇಲ್ಲಿನ ನೆಲದಲ್ಲಿ ಕೋಮು ಸೌಹಾರ್ದತೆಯನ್ನು, ಜನಮನದಲ್ಲಿ ಬಿಂಬಿಸಿ ಸಹೋದರತೆಯ ಪ್ರೀತಿ ಬಾಂಧವ್ಯವನ್ನು ತೋರಿದವರು. ಇವರ ಬದುಕಿನ ಬೆಳಕನ್ನು ನಾಟಕ ರೂಪದಲ್ಲಿ ಬರೆದು ಹಲವು ಪಾತ್ರಗಳ ಮೂಲಕ ಓದುಗರಿಗೆ ತಿಳಿಸುವಲ್ಲಿ ಕವಿ ಪುಟ್ಟರಾಜ ಗವಾಯಿಗಳವರು ಯಶಸ್ವಿಯಾಗಿದ್ದಾರೆ. ಮಕ್ಕಳಿಲ್ಲದೆ ಚಿಂತಿತಳಾಗಿ ದರ್ಗಾಕ್ಕೆ ಬಂದಂತಃ ತಾಯಿ ಗೌರಮ್ಮ ಖಾಜಿ ಅಮೀನುದ್ದೀನ ಸಾಹೇಬರಲ್ಲಿ ತನ್ನ ವ್ಯಸನವನ್ನು ಹೇಳಿಕೊಳ್ಳುವ, ಅದಕ್ಕೆ ಪ್ರತಿಯಾಗಿ ಆ ತಾಯಿಯ ಚಿಂತೆಯನ್ನು ಹೋಗಲಾಡಿಸಿ ಪುತ್ರ ಭಾಗ್ಯವನ್ನು ನೀಡುವ ಖಾಜಿ ಅಮೀನುದ್ದೀನ್ ಸಾಹೇಬರು ಒಂದು ಕರಾರನ್ನು ಹಾಕುತ್ತಾರೆ. "ಮೊದಲ ಮಗುವನ್ನು ನಮಗೆ ಒಪ್ಪಸಬೇಕು" ಎನ್ನುವದೇ ಆ ಕರಾರು. ಪುತ್ರ ಭಾಗ್ಯ ದೊರೆತ ಸಂತೋಷದಲ್ಲಿ ಕರಾರಿಗೆ ಒಪ್ಪಿಗೆ ಸೂಚಿಸಿದ ಗೌರಮ್ಮ ಹರ್ಷಭರಿತಳಾಗುತ್ತಾಳೆ. ಈ ಸನ್ನವೇಶದಿಂದಕವಿ ಪುಟ್ಟರಾಜ 'ಶಿರಹಟ್ಟಿ ಜಗದ್ಗುರು ಶ್ರೀ ಫಕೀರೇಶ್ವರ ಮಹಾತ್ಮೆ' ನಾಟಕ ಆರಂಭವಾಗುತ್ತದೆ.

ನಂತರದ ದೃಶ್ಯಗಳಲ್ಲಿ ಬಾದಷಹರಿಗೆ ಖಾಜಿ ಅಮೀನುದ್ದೀನ್ ಸಾಹೇಬರು ತಿಳುವಳಿಕೆ ಹೇಳುವದು, ಜಾತಿ ವೈಷಮ್ಯಗಳನ್ನು ಪ್ರಜೆಗಳಲ್ಲಿ ಬಿತ್ತಬಾರದೆಂದು ಬುದ್ದಿವಾದ ಹೇಳುತ್ತಾರೆ.

ನೀಲಮ್ಮ ಮತ್ತು ನೀಲ್ಯಾ ಪಾತ್ರಗಳಲ್ಲಿ ಹಾಸ್ಯದ ಮಾತುಗಳು, ಉರ್ದು ಮಿಶ್ರಿತ ಸಂಭಾಷಣೆ ಓದುಗರಲ್ಲಿ ಕಚಗುಳಿ ಇಡುತ್ತವೆ. ಗ್ರಾಮೀಣ ಸೊಗಡು, ಆಡು ಭಾಷೆಯಲ್ಲಿ ಪ್ರಾಧಾನ್ಯತೆ ಪಡೆದಿವೆ. ಗೌರಮ್ಮ ತಾಯಿಗೆ ಮಗುವಾದ ಸಂಭ್ರಮ ನಾಮಕರಣ ಸಮಾರಂಭದ ಸನ್ನುವೇಶ ಕಣ್ಮನಗಳನ್ನು ಸೆಳೆಯುತ್ತವೆ. ನಂತರ ಗೌರಮ್ಮ ತಾಯಿ ಖಾಜಿ ಅಮೀನುದ್ದೀನ್ ಸಾಹೇಬರಿಗೆ ಕೊಟ್ಟ ಕರಾರನ್ನು ಮರೆಯುವುದು, ಮಗು ಅನಾರೋಗ್ಯವಾದಾಗ ಖಾಜಿ ಸಾಹೇಬರು ನೆನಪಿಸುವುದು, ಫಕೀರೇಶ್ವರ ನಾಮಾಂಕಿತ ಹೊಂದುವ ಮಗು ಬೆಳೆಯುವದು ಇವೆಲ್ಲ ಚರಿತ್ರೆಯನ್ನು ಮರುಕಳಿಸುತ್ತವೆ.

ನಂತರದಲ್ಲಿ ಫಕೀರೇಶ್ವರರು ಖಾಜಿ ಅಮೀನುದ್ದೀನ ಸಾಹೇಬರ ಆದೇಶದಂತೆ ನಾಡನ್ನು ಸಂಚರಿಸಿ ಲೀಲೆಗಳನ್ನು ತೋರುತ್ತ ನಂಬಿದ ಭಕ್ತರನ್ನು ಉದ್ಧರಿಸುತ್ತ ಶಿರಹಟ್ಟಿಗೆ ಬಂದು ನೆಲೆಸುತ್ತಾರೆ. ದ್ವೇಷ ಬಿಡು ಪ್ರೀತಿ ಮಾಡು ಎನ್ನುವ ಸಿದ್ಧಾಂತವನ್ನು ಜನರ ನಿತ್ಯ ಬದುಕಲ್ಲಿ ಹಾಸು ಹೊಕ್ಕಾಗುತ್ತಾರೆ.

ವಿಚಿತ್ರ ಮತ್ತು ಸತ್ಯ ಎನ್ನುವಂತೆ ಮತಾಂಧನಾಗಿದ್ದ ಶೇರ್‌ಖಾನ್ ಫಕೀರೇಶ್ವರರ ಕೃಪಾಕಟಾಕ್ಷದಿಂದ ಮಾನವೀಯ ಗುಣಗಳನ್ನು ಹೊಂದುತ್ತಾನೆ, ಪುನರ್ಜನ್ಮ ಪಡೆಯುತ್ತಾನೆ. ಇಂತಹ ಹಲವಾರು ಘಟನೆಗಳಿಂದ ಫಕೀರೇಶ್ವರರು ನಾಡಿನಲ್ಲಿ ಕೋಮು ಸೌಹಾರ್ಧತೆಯ ಗುರುತಾಗಿ ಎತ್ತರದ ಗಿರಿ ಏರುತ್ತಾರೆ, ಮೂರು ಅಂಕಗಳು 13 ಭಾಗಗಳಲ್ಲಿ ನಾಟಕ ಶ್ರೀ ಫಕೀರೇಶ್ವರರ ಬದುಕಿನ ಬೆಳಕನ್ನು ಬೀರುವಲ್ಲಿ ಯಶಸ್ವಿಯಾಗುತ್ತದೆ.

ಇಡೀ ನಾಟಕವನ್ನು ಓದಿದ ಮೇಲೆ ಅಥವಾ ನೋಡಿದ ಮೇಲೆ ಈ ಮಾತುಗಳು ಮನದಲ್ಲಿ ದಾಖಲಾಗುತ್ತವೆ. "ಹಿಂದೂ ಮುಸಲ್ಮಾನ ಎಂಬ ಭೇದವು ಕೇವಲ ನಿಮ್ಮ ಮನೆಯಲ್ಲಿಯೇ ಉಳಿಯಬೇಕಲ್ಲದೇ ಅದು ನಿಮ್ಮ ಮನದಲ್ಲಿ ಉಳಿಯಬಾರದು". "ತಾಯಿ ತಂದೆಯ ಮನೆಗೆ ಹೋಗುವ ವಿಚಾರವು ನರಪುತ್ರರಿಗಲ್ಲದೇ ಗುರುಪುತ್ರರಿಗಲ್ಲ". "ಜಗತ್ತಿನಲ್ಲಿ ಸ್ತ್ರೀ ವರ್ಗ ತಾಯಿಯೆಂದೂ, ಪುರುಷ ವರ್ಗವೆಲ್ಲ ತಂದೆಯೆಂದೂ ತಿಳಿಯಲು ನನ್ನ ಗುರುವಿನ ಉಪದೇಶ ಸಂಸ್ಕಾರವಾಗಿದೆ".

ನಡೆ ನುಡಿಗಳೆರಡೂ ಒಂದಾಗದ ಹೊರತು ಮನುಷ್ಯನಿಗೆ ಶಾಂತಿ ಇಲ್ಲ. ಜಾತಿ ಭೇದಗಳನ್ನು ಮರೆತು ಎಲ್ಲರು ಒಂದಾಗಿ ಬಾಳಬೇಕು. ಕವಿ ಪುಟ್ಟರಾಜರ ಗುರುಗಳು ನಾಟಕದಲ್ಲಿ ಬಳಸಿದ ಮಾತುಗಳು ಇವತ್ತಿಗೂ ಪ್ರಸ್ತುತ, ಅನುಕರಣೀಯ.

**ಸವತಿ ಮತ್ಸರ**

ಪಂ. ಪುಟ್ಟರಾಜ ಕವಿ ಗವಾಯಿಗಳವರ ಮತ್ತೊಂದು ನಾಟಕ ಸವತಿಯ ಮತ್ಸರ. ಒಂದು ಕುಟುಂಬದಲ್ಲಿ ನಡೆಯಬಹುದಾದ ಘಟನೆಗಳನ್ನು, ಅದರಿಂದಾಗುವ ಅನಾಹುತಗಳನ್ನು, ಕೌಟುಂಬಿಕವಾಗಿ ಆಗುವ ಪರಿಣಾಮಗಳನ್ನು ಎದುರಿಗೆ ನಡೆಯುವಂತೆ ಚಿತ್ರಿಸಿದ್ದಾರೆ.

ಹೆಸರೇ ಸೂಚಿಸುವಂತೆ ಸವತಿಯ ಮತ್ಸರ ಇಡೀ ನಾಟಕದ ಕೇಂದ್ರ ಬಿಂದು. ಸುಧರ್ಮ ಮತ್ತು ಸುದೇಹಿ ಪತಿ ಪತ್ನಿಯರು. ಮಕ್ಕಳಾಗದ ಚಿಂತೆ ಇಬ್ಬರಲ್ಲಿಯೂ ಕಾಡುತ್ತಿತ್ತು. ಸುಧರ್ಮ ಸಾತ್ವಿಕ ಸ್ವಭಾವದವ. ಇದರ ತದ್ವಿರುದ್ಧ ಪತ್ನಿ ಸುದೇಹಿ. ಧಾರ್ಮಿಕ ವಿಧಿ ವಿಧಾನಗಳನ್ನು ನಂಬದ ಒರಟು ಸ್ವಭಾವ, ಮಕ್ಕಳಾಗದೇ ಇದ್ದುದ್ದರಿಂದ ಪತಿ ಎರಡನೇ ಮದುವೆಯಾದರೆ ಏನು ಗತಿ? ಎಂದು ಚಿಂತಿಸಿ ಆಗುವದಾದರೆ ತನ್ನ ಕಿರಿಯ ಸಹೋದರಿ ಘೂಶ್ಮಾಳನ್ನೆ ಆಗಲಿ ಎಂದು ಹೊಂಚು ಹಾಕಿ ಒಪ್ಪಿಸಿ ಮದುವೆ ಮಾಡಿಸುತ್ತಾಳೆ. ಆದರೆ ಇವಳೊಳಗಿನ ಅಸೂಹೆ ಬುದ್ಧಿ, ಮತ್ಸರದ ಗುಣ ಸಹೋದರಿ ಎನ್ನುವದನ್ನು ಮರೆತು ಅವಳ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿ ನಿತ್ಯ ಕಿರಿ ಕಿರಿ ಕೊಡಲು ಪ್ರಾರಂಭಿಸುತ್ತಾಳೆ.

ಅಕ್ಕ ಎಷ್ಟೇ ತೊಂದರೆ ಕೊಟ್ಟರೂ ಅದೆಲ್ಲವನ್ನೂ ಸಹಿಸಿಕೊಳ್ಳುವ ಸಹನಾ ಮೂರ್ತಿಯಾಗಿ ಘೂಶ್ಮಾ ಓದುಗರ ನಾಯಕಿಯಾಗಿ ತೋರುತ್ತಾಳೆ. ಆದರೂ ಮತ್ಸರದ ಬೆಂಕಿಯನ್ನು ಮೈಮನಗಳಲ್ಲಿ ಆವರಿಸಿಕೊಂಡ ಸುದೇಹಿ ತಂಗಿಯನ್ನು ಕೊಲ್ಲಲು ಪ್ರಯತ್ನ ಪಟ್ಟು ವಿಫಲಳಾಗುತ್ತಾಳೆ. ಗಂಡು ಮಗುವಾದಾಗ ಒಳಗೆ ಕುದಿಯುತ್ತಾಳೆ. ಆರು ವರ್ಷದ ಮಗುವನ್ನು ಅಕ್ಕನ ಹತ್ತಿರವೇ ಬಿಟ್ಟು ತಂಗಿ ಉದಾರತನವನ್ನು ತೋರುತ್ತಾಳೆ. ಇದನ್ನೆ ದುರುಪಯೋಗಪಡಿಸಿಕೊಂಡ ಸುದೇಹಿ ಮಗುವನ್ನು ಕೊಲ್ಲುತ್ತಾಳೆ. ಮತ್ಸರದ ಬೆಂಕಿ ಧಗಧಗಿಸುತ್ತದೆ. ಅಲ್ಲಿಗೆ ಬಂದ ತಂಗಿ ಘೂಶ್ಮಾ ದುಃಖಬರಿತಳಾಗಿ ಕಣ್ಣೀರು ಹಾಕಿದರೂ ನೆಲಕ್ಕೆ ಬಿದ್ದು ಸಾಯುವ ಸ್ಥಿತಿಯಲ್ಲಿದ್ದ ಅಕ್ಕನನ್ನು ಬದುಕಿಸುವಂತೆ ದೇವನಲ್ಲಿ ಪ್ರಾರ್ಥಿಸುತ್ತಾಳೆ. ಇದು ಅವಳ ಸಹನೆಯ ಎತ್ತರ. ಸುದೇಹಿಯ ಸವತಿ ಮತ್ಸರ ತಣ್ಣಗಾಗುತ್ತದೆ.

ಕುಟುಂಬದ ಏರಿಳಿತಗಳು, ಸಹೋದರಿಯರ ಮಾನಸಿಕ ಸ್ಥಿತಿ ಪೋಷಕ ಪಾತ್ರಗಳ ಸಹಕಾರ, ಸಿಟ್ಟು, ಸೆಡವು, ಹಾಸ್ಯ, ಸಹನೆ, ಸಹಕಾರ ಮುಂತಾದ ಸ್ವಭಾವಗಳನ್ನು ನಾಟಕದಲ್ಲಿ ಚಿತ್ರಿಸಿದ ಕವಿ ಪುಟ್ಟರಾಜ ಗವಾಯಿಗಳು ಅಭಿನಂದನಾರ್ಹರು. ಬರೆದ ನಾಟಕವನ್ನು ಶ್ರೀ ವೀರೇಶ್ವರ ಪುಣ್ಯಾಶ್ರಮದ ಕಲಾವಿದರೇ ಅಭಿನಯಿಸಿ ನಾಡಿನ ಹಲವಾರು ಕಡೆ ಪ್ರದರ್ಶಿಸಿ ಯಶಸ್ವಿಗೊಳಿಸಿದ್ದು ಶ್ಲಾಘನೀಯ. ಹೀಗೆ ಗುರುಗಳು ನಾಟಕಗಳನ್ನು ತಮ್ಮ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದು ಕಾಣುತ್ತೇವೆ ಅವರ ಎರಡು ನಾಟಕಗಳ

ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದ್ದು ಇನ್ನುಳಿದ ನಾಟಕಗಳನ್ನು ಉಲ್ಲೇಖಿಸಲಾಗಿದೆ.
ಶಿವಯೋಗಿ ಶ್ರೀ ಸಿದ್ಧರಾಮೇಶ್ವರ, ಭಗವಾನ ಶ್ರೀ ಬಸವೇಶ್ವರ, ನೆಲ್ಲೂರ ನಿಂಬಕ್ಕ, ಹಾನಗಲ್ಲ ಶ್ರೀ ಕುಮಾರೇಶ್ವರ ಮಹಾತ್ಮೆ, ಶಿವಶರಣ ಮೋಳಿಗಿ ಮಾರಯ್ಯ, ಶಿವಶರಣ ಉಡತಡಿ ಅಕ್ಕಮಹಾದೇವಿ, ಸತಿ ಸುಕನ್ಯಾ, ಮಿಂಚು, ಶ್ರೀ ರಾಜಶೇಖರ ವಿಲಾಸ, ಶ್ರೀ ಕೊಟ್ಟೂರ ಬಸವೇಶ್ವರ, ಸ್ತ್ರಿ ಪ್ರೇಮ, ಶಿವಶರಣ ಚನ್ನಯ್ಯ, ಶ್ರೀ ಗುರುದರ್ಶನ, ಶಿರಹಟ್ಟಿ ಶ್ರೀ ಫಕೀರೇಶ್ವರ ಮಹಾತ್ಮೆ, ದೇವರ ದುಡ್ಡು (ಬಾಲಚಂದ್ರ ಭಕ್ತಿ), ತ್ಯಾಗವೀರ ಸಿರಸಂಗಿ ಲಿಂಗರಾಜರು, ಸವತಿ ತಾತ್ಸಾರ, ಮಹಾರಥಿ ಭೀಷ್ಮ, ಮಗನ ಪ್ರೇಮ, ಶ್ರೀಕೃಷ್ಣ ಗಾರುಡಿ, ಸ್ತ್ರಿ ಜೀವನ, ಘೊಷ್ಮಾದೇವಿ".

**ಧಾರ್ಮಿಕ ಸಾಹಿತ್ಯ ಕೃತಿಗಳು**

ಪಂ ಪುಟ್ಟರಾಜ ಕವಿ ಗವಾಯಿಗಳವರ ಕನ್ನಡ ಸಾಹಿತ್ಯದಲ್ಲಿಯ ಇನ್ನೊಂದು ವಿಭಾಗವೆಂದರೆ ಅದು ಧಾರ್ಮಿಕ ಸಾಹಿತ್ಯ ಇಲ್ಲಿ ಅನೇಕ ಭಕ್ತಿ ಪ್ರಧಾನವಾದ ಸಾಹಿತ್ಯ, ಶರಣರ ಜೀವನ ಚರಿತ್ರೆಗಳು, ಅನೇಕ ಸಂತರ ಪುರಾಣ ಸಾಹಿತ್ಯಗಳು, ಭಕ್ತಿಗೀತೆಗಳು ಮುಂತಾದವುಗಳನ್ನು ಕಾಣಬಹುದಾಗಿದೆ. ಅದರಲ್ಲಿಯ ಅವರ ಕೃತಿಗಳು. ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ, ಅಂಕಲಗಿ ಅಡವಿಸಿದ್ಧೇಶ್ವರ ಪುರಾಣ, ಹಾವೇರಿ ಶಿವಬಸವಸ್ವಾಮಿ ಪುರಾಣ, ಗಂಜಿಗಟ್ಟಿ ಶ್ರೀ ಚರಮೂರ್ತೇಶ್ವರ ಪುರಾಣ, ತ್ರಿಷಷ್ಠಿ ಪುರಾತನ ಪುರಾಣ, ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ, ಮುಂಡರಗಿಯ ಕರ್ತೃ ಶ್ರೀ ಅನ್ನದಾನೀಶ್ವರ ಪುರಾಣ, ದಾವಣಗೇರಿಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಪುರಾಣ, ನಾಲತ್ವಾಡದ ಶ್ರೀ ವೀರೇಶ್ವರ ಶರಣ ಪುರಾಣ, ಶ್ರೀ ಶಿವಲಿಂಗೇಶ್ವರ ಪುರಾಣ, ಗಂಗಾವತಿಯ ಶ್ರೀ ಚನ್ನಬಸವಸ್ವಾಮಿ ಪುರಾಣ, ಶ್ರೀ ಯೋಗಿರಾಜ ಪುರಾಣ, ಗುಳೇದ ಶ್ರೀ ಗಾದಿಲಿಂಗೇಶ್ವರ ಪುರಾಣ, ಶ್ರೀ ವೀರಭದ್ರೇಶ್ವರ ಪುರಾಣ, ಚಿಕ್ಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪುರಾಣ, ಕಲಕೇರಿ ಗುರುಮಹಿಮಾ ಪುರಾಣ, ವೈರಾಗ್ಯನಿಧಿ ಅಕ್ಕಮಹಾದೇವಿ ಪುರಾಣ, ಮಹಾಶಿವಶರಣೆ ಗುಡ್ಡಾಪೂರ ದಾನಮ್ಮದೇವಿ ಪುರಾಣ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪುರಾಣ, ಮುಗಳಖೋಡ ಯಲ್ಲಾಲಿಂಗೇಶ್ವರ ಪುರಾಣ, ಶ್ರೀ ದೇವಿ ಪುರಾಣ, ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣ, ಗಂಡಿಗ್ಗೇಜ ಸ್ವಾಮಿಗಳ ಪುರಾಣ, ಶ್ರೀಶೈಲ ಜಗದ್ಗುರು ಪರಂಪರಾ ಪುರಾಣ, ಶ್ರೀ ಗೋಲಗೇರಿ ಗೊಲ್ಲಾಳೇಶ್ವರ ಪುರಾಣ, ಹಾನಗಲ್ಲ ಶ್ರೀ ಸದಾಶಿವ ಮಹಾಸ್ವಾಮಿಗಳ ಪುರಾಣ.

**ಭಕ್ತಿ ಪ್ರಧಾನ ಕೃತಿಗಳು**

ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ನಾಮಾವಳಿ, ಭಾವ ಮಂದಾಕಿನಿ, ಚಂಪೋಕಾವ್ಯ, ಕದರಿ ರೇವಯ್ಯ, ವ್ಯಾಖ್ಯಾನ ರತ್ನಮಾಲಿಕಾ, ಅಷ್ಟಾವರಣ ಕಥಾಕೀರ್ತನ ಮಾಲಿಕೆ, ತತ್ವಬೋಧಾಮೃತ, ಪಂಚಾಕ್ಷರ ಗವಾಯಿ, ಗುರುಕುಮಾರ ಶಿವಯೋಗಿಗಳು, ಗುರು ವಚನ ಪ್ರಭ.
ಗುರು ವಚನ ಪ್ರಭ ಎಂಬುವದೊಂದು ವಚನ ಸಾಹಿತ್ಯವಾಗಿದ್ದು ಪಂ. ಪುಟ್ಟರಾಜ ಕವಿ ಗವಾಯಿಗಳವರು ಶರಣರ ತತ್ವಗಳನ್ನು ಪಾಲಿಸುವ ಮಾಹಾನ್ ಶರಣರು ಅದು ಈ ಕಲಿಯುಗದ ದೇವರೆಂದು ಬದುಕಿದ ಮಹಾನ ಚೇತನರು. ಈ ವಚನ ಸಾಹಿತ್ಯದಲ್ಲಿ 729 ವಚನಗಳ ಬಹು ದೊಡ್ಡ ಬಂಡಾರವೇ ಇದೆ, ಇದರಲ್ಲಿ ಸ್ಥಲವಾಧರಿತ ವಚನಗಳನ್ನು ರಚಿಸಿರುವುದು ಕಂಡುಬರುತ್ತವೆ. ಅವರ ಅನೇಕ ವಚನಗಳಲ್ಲಿ ದೇಶ, ಭಾಷೆಯ ಸಾಹಿತ್ಯವನ್ನು ಸಹ ಒಳಗೊಂಡಿರಿವುದು ಕಾಣುತ್ತೇವೆ. ಶರಣನಾದವನು ಹೇಗಿರಬೇಕು ಮತ್ತು ಅವಕಾಶವಾದಿಯ ಹಾಗೆ ಬಣ್ಣಬದಲಿಸುವಂತಹ ಸ್ವಾಮಿಗಳನ್ನು ಸಹ ಉಲ್ಲೇಖಿಸಿ ವಚನವನ್ನು ಬರೆದಿದ್ದಾರೆ. ಅವರ ವಚನ ಸಂಖ್ಯೆ 168 ರ ವಚನದಲ್ಲಿ ಹೀಗೆ ಹೇಳಿರುವುದನ್ನು ನಾವು ಕಾಣಬಹುದು.

"ಕಾವಿಯ ವಸ್ತ್ರವನ್ನು ಧರಿಸಿ
ವಿಭೂತಿ ರುದ್ರಾಕ್ಷಿಗಳನ್ನು ವಿಶೇಷವಾಗಿ ಧರಿಸಿ
ವೇದಾಗಮ ವಾಕ್ಯಗಳನ್ನು ಭೋದಿಸಿ
ಸಮಯ ಬಂದಾಗೆಲ್ಲ ಅವುಗಳಂತೆ ಆಚರಿಸಿ
ಧನವನ್ನು ಸೆಳೆಯುವ ವಿತ್ತಾಪಹಾರಿ ಗುರುಗಳ
ಮುಖವನ್ನು ನನಗೆ ತೋರದೆ ವೃತ್ತಾಪಹಾರಿ ಗುರುಗಳನ್ನೇ ನನಗೆ
ಕಲ್ಪಿಸಿ ಕೊಡಯ್ಯ ಗುರುಕುಮಾರ ಪಂಚಾಕ್ಷರೇಶ್ವರ" [3] ॥

## ಉಲ್ಲೇಖಗಳು


1. ಸಂಗೀತ ಶಾಸ್ತ್ರಜ್ಞಾನ, ರಚನೆ – ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು, ಪುಟ ಸಂ – ಮುನ್ನುಡಿಯ ಭಾಗದ ಪುಟ – 5
2. ಸಂಗೀತ ಶಾಸ್ತ್ರಜ್ಞಾನ, ರಚನೆ – ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು, ಪುಟ ಸಂ – ಮುನ್ನುಡಿಯ ಭಾಗದ ಪುಟ – 5
3. ಶ್ರೀ ಗುರು ವಚನ ಪ್ರಭ, ರಚನೆ – ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು, ಪುಟ ಸಂ – 43, ವಚನ ಸಂ – 168